# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ,ಬಿ.ಹೆಚ್ ರಸ್ತೆ, ತುಮಕೂರು–572 103

ಸಂಖ್ಯೆ:ತುವಿ:ಅವಿ:8866-1/2024-25/3375 ದಿನಾಂಕ:10.02.2025

## ಸುತ್ತೋಲೆ

ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಡಾ.ಗದ್ದಗಿ ಮಠ, ಧಾರವಾಡ ಇವರ ರಾಜ್ಯ ಮಟ್ಟದ ಪ್ರಶಸ್ತಿಗಳ ಕುರಿತು.

ಉಲ್ಲೇಖ: 1.ಪುಲಕೇಶಿ ಬ ಗದ್ದಗಿಮಠ ಧಾರವಾಡ, ಇವರ ಪತ್ರ ದಿನಾಂಕ:30.01.2025

2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.02.2025 (ಕಂಡಿಕೆ–211)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ ಡಾ.ಬಿ ಎಸ್ ಗದ್ದಗಿಮಠ ಮತ್ತು ಶ್ರೀಮತಿ ಅನಸೂಯಾದೇವಿ ಗದ್ದಗಿಮಠ ಪ್ರತಿಷ್ಠಾನ, ಧಾರವಾಡ ಇವರಿಂದ 2026 ಜನವರಿ ತಿಂಗಳಲ್ಲಿ ಆಯೋಜಿಸಲಾಗುವ ಡಾ.ಬಿ ಎಸ್ ಗದ್ದಗಿಮಠ ದತ್ತಿ ಕಾರ್ಯಕ್ರಮದಲ್ಲಿ (1) ಡಾ.ಬಿ ಎಸ್ ಗದ್ದಗಿಮಠ ಜಾನಪದ ಸಾಹಿತ್ಯ ಪ್ರಶಸ್ತಿ(ಪುರುಷ ಪ್ರಶಸ್ತಿ) (2) ಅನಸೂಯಾದೇವಿ ಕಲಾ ಪ್ರಶಸ್ತಿ(ಮಹಿಳಾ ಪ್ರಶಸ್ತಿ) ಗಳನ್ನು ನೀಡಲಾಗುವುದು ಎಂದು ತಿಳಿಸಿರುತ್ತಾರೆ(ಪ್ರತಿ ಲಗತ್ತಿಸಿದೆ) ಆದ್ದರಿಂದ ಡಾ. ಬಿ ಎಸ್ ಗದ್ದಗಿಮಠ ದತ್ತಿ ಕಾರ್ಯಕ್ರಮದ ಉಪಯೋಗವನ್ನು ವಿಶ್ವವಿದ್ಯಾನಿಲಯದ ಆಸಕ್ತಿಯುಳ್ಳ ಅಧ್ಯಾಪಕರು ಹಾಗೂ ಪಿಹೆಚ್‌ಡಿ ಸಂಶೋಧನಾ ವಿದ್ಯಾರ್ಥಿಗಳು ಪಡೆದುಕೊಳ್ಳುವಂತೆ ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

ಆದೇಶದ ಮೇರೆಗೆ

ಉಪಕುಲಸಚಿವರು

ಅಭಿವೃದ್ಧಿ ವಿಭಾಗ

ಗೆ.

1. ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಅಧ್ಯಾಪಕರುಗಳಿಗೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಎಲ್ಲಾ ಅಧ್ಯಾಪಕರುಗಳಿಗೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಪಿಹೆಚ್‌ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ನಿರ್ದೇಶಕರು, ಪಿಹೆಚ್‌ಡಿ ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು:– ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಸಂಶೋಧನಾರ್ಥಿಗಳ ಗಮನಕ್ಕೆ ತರುವುದು
2. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಸದರಿ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ–ಮೇಲ್ ಮುಖಾಂತರ ಕಳುಹಿಸುವುದು ಮತ್ತು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.

NHD24

ಡಾ. ಬಿ.ಎಸ್. ಗದ್ದಗಿಮಠ ಮತ್ತು ಶ್ರೀಮತಿ ಅನಸೂಯಾದೇವಿ ಗದ್ದಗಿಮಠ ಪ್ರತಿಷ್ಠಾನ, ಧಾರವಾಡ

**Dr. B. S. Gaddagimath & Smt. Anasuyadevi Gaddagimath Pratisthana, Dharwad**

ಸಮರ್ಪಣ SAMARPANA


Board of Trustees
Shri S. B. Gaddagimath
Dr. R. B. Gaddagimath
Shri P. B. Gaddagimath
Dr. N. B. Gaddagimath
Shri Shivakumar Swamy


ಗೆ, ಕುಲಪತಿಗಳು,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು-572103

ಮಾನ್ಯರೇ,

ಅಗ್ರಗಣ್ಯ ಜಾನಪದ ವಿದ್ವಾಂಸ ಡಾ.ಬಿ.ಎಸ್. ಗದ್ದಗಿಮಠರು ಜಾನಪದ ಸಾಹಿತ್ಯ - ಸಂಶೋಧನೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟು ನಿರಂತರ ಸಂಶೋಧನೆಯೊಂದಿಗೆ ಕನ್ನಡ ಜಾನಪದ ಸಾಹಿತ್ಯ ಒಂದು ಮೌಲಿಕವಾದ ಅಧ್ಯಯನ ಹಾಗೂ ಸಂಶೋಧನೆಗೆ ಯೋಗ್ಯವಾದ ವಿಷಯವೆಂದು ಮಾನ್ಯತೆ ದೊರಕಿಸಿಕೊಟ್ಟ ಕಾರಣಿಭೂತರು. ಸನ್ 1954 ನೇ ಸಾಲಿನಲ್ಲಿಯೇ ಜಾನಪದ ವಿಷಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಪ್ರಥಮರಾಗಿ ಪಿ. ಹೆಚ್. ಡಿ. ಪದವಿ ಪಡೆದ ಅಗ್ರಗಣ್ಯರು. ಡಾ. ಗದ್ದಗಿಮಠರ ಈ ಪಿ. ಹೆಚ್. ಡಿ. ಪದವಿ ಕರ್ನಾಟಕ ವಿಶ್ವ ವಿದ್ಯಾಲಯದಿಂದ ಹೊರಬಂದ ಪ್ರಪ್ರಥಮ ಪಿ. ಹೆಚ್ ಡಿ ಪದವಿಯಾಗಿದ್ದು ಭಾರತ ದೇಶದಲ್ಲಿಯೇ ಜಾನಪದ ಕ್ಷೇತ್ರದಲ್ಲಿ ಪಡೆದ ಪ್ರಪ್ರಥಮ ಪಿ. ಹೆಚ್. ಡಿ. ಪದವಿಯಾಗಿದೆ.

ಕನ್ನಡ ಜಾನಪದ ಕ್ಷೇತ್ರಕ್ಕೆ ಅಪಾರ ಸೇವೆ ಹಾಗೂ ಕೊಡುಗೆಯನ್ನು ನೀಡಿದ ಡಾ. ಗದ್ದಗಿಮಠರು ಸನ್ 1960 ನವೆಂಬರ್ 02 ರಂದು ಇಹಲೋಕ ತ್ಯಜಿಸಿದರು. ಈ ಶ್ರೀಯುತರ ಸ್ಮರಣಾರ್ಥ ಅವರ ಮಕ್ಕಳು ಹಾಗೂ ಕುಟುಂಬದವರು "ಸಮರ್ಪಣ - ಡಾ. ಬಿ. ಎಸ್. ಗದ್ದಗಿಮಠ ಹಾಗೂ ಶ್ರೀಮತಿ ಅನಸೂಯಾದೇವಿ ಗದ್ದಗಿಮಠ ಪ್ರತಿಷ್ಠಾನ " ಎಂಬ ಚಾರಿಟೆಬಲ್ ಟ್ರಸ್ಟ್ ಸ್ಥಾಪಿಸಿ ಈ ಮೂಲಕ ಜಾನಪದ ಕ್ಷೇತ್ರಕ್ಕೆ ತಮ್ಮ ಸೇವೆಯನ್ನು ಮುಂದುವರೆಸಿಕೊಂಡು ಹೋಗುವ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತಿದೆ. ಡಾ. ಗದ್ದಗಿಮಠರ ಮಕ್ಕಳು ಸ್ಥಾಪಿಸಿದ ಈ ಪ್ರತಿಷ್ಠಾನದ ಉದ್ಘಾಟನೆಯನ್ನು ಜನವರಿ 09, 2025 ರಂದು ಮಾಡಲಾಯಿತು. ಈ ಉದ್ಘಾಟನಾ ಸಮಾರಂಭದಲ್ಲಿ ಟ್ರಸ್ಟಿನ ಆಡಳಿತ ಮಂಡಳಿಯು ರಾಜ್ಯಮಟ್ಟದ ಎರಡು ಪ್ರಶಸ್ತಿಗಳನ್ನು ಸ್ಥಾಪಿಸಿರುವುದಾಗಿ ಘೋಷಣೆಮಾಡಿದರು.

1. ಡಾ. ಬಿ. ಎಸ್. ಗದ್ದಗಿಮಠ ಜಾನಪದ ಸಾಹಿತ್ಯ ಪ್ರಶಸ್ತಿ (ಪುರುಷ ಪ್ರಶಸ್ತಿ).
2. ಅನಸೂಯಾ ಕಲಾ ಪ್ರಶಸ್ತಿ ( ಮಹಿಳಾ ಪ್ರಶಸ್ತಿ ).

ಈ ಎರಡೂ ಪ್ರಶಸ್ತಿಗಳನ್ನು ಕರ್ನಾಟಕ ವಿದ್ಯಾ ವರ್ಧಕ ಸಂಘ, ಧಾರವಾಡದ ಸಹಯೋಗದಲ್ಲಿ ಸನ್ 2026 ಜನವರಿ ತಿಂಗಳಲ್ಲಿ ಆಯೋಜಿಸಲಾಗುವ ಡಾ. ಬಿ. ಎಸ್. ಗದ್ದಗಿಮಠ ದತ್ತಿ ಕಾರ್ಯಕ್ರಮದಲ್ಲಿ ಕೊಡಲಾಗುವುದು. ಪ್ರತಿಯೊಂದು ಪ್ರಶಸ್ತಿ ಇಪ್ಪತ್ತು ಸಾವಿರ (20,000/-) ರೂಪಾಯಿ ನಗದು, ಫಲಕ, ಪ್ರಶಸ್ತಿಪತ್ರ ಹಾಗೂ ಸನ್ಮಾನಗಳನ್ನು ಒಳಗೊಂಡಿರುವುಧಾಗಿದೆ.

ಈ ಪ್ರಶಸ್ತಿಗಳ ವಿವರಗಳನ್ನು ತಮ್ಮ ವಿಶ್ವ ವಿದ್ಯಾಲಯದಲ್ಲಿ ಓದುತ್ತಿರುವ ಹಾಗೂ ಸಂಶೋಧನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಲ್ಲೂ, ಪ್ರಾಧ್ಯಾಪಕರಲ್ಲೂ ಪ್ರಚುಲಿತಗೊಳಿಸಬೇಕೆಂದು ತಮ್ಮಲ್ಲಿ ಕೋರುವೆ.

ಪ್ರತಿಷ್ಠಾನದ ಉದ್ಘಾಟನೆ ಸಮಾರಂಭದಲ್ಲಿ ಡಾ. ಗದ್ದಗಿಮಠರ ಕುರಿತು " ಅಗ್ರಗಣ್ಯ ಜಾಪದ ವಿದ್ವಾಂಸ ಡಾ. ಬಿ. ಎಸ್. ಗದ್ದಗಿಮಠ " ಪುಸ್ತಕವನ್ನು ಬಿಡುಗಡೆ ಮಾಡಲಾಗಿದ್ದು ಇದರ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ

ಪುಲಕೇಶಿ ಬ. ಗದ್ದಗಿಮಠ
ವ್ಯವಸ್ಥಾಪಕ ಟ್ರಸ್ಟಿ

SAMARPANA
Dr. B. S. Gaddagimath and
Smt. Anasuyadevi Gaddagimath
Pratisthana
Managing Trustee

ಸಮರ್ಪಣ SAMARPANA
Dr. B. S. Gaddagimath & Smt. Anasuyadevi Gaddagimath Pratisthana